ಕರ್ನಾಟಕ ವಿಧಾನ ಪರಿಷತ್ತು

ಗಣಿ&ಭೂವಿಜ್ಞಾನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1864
ಸದಸ್ಯರ ಹೆಸರು	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	24-03-2020
ಉತ್ತರಿಸುವ ಸಚಿವರು	ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಕಳೆದ ಐದು ವರ್ಷಗಳಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರ ಮತ್ತು ಅವ್ಯವಹಾರಗಳ ಪ್ರಕರಣಗಳು ಎಷ್ಟು; (ಪ್ರಕರಣಗಳ ವಿವರ, ದಿನಾಂಕವಾರು ಮಾಹಿತಿ ನೀಡುವುದು) ಈ ಪ್ರಕರಣಗಳಲ್ಲಿ ಭಾಗಿಯಾಗಿರುವ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿ/ನೌಕರರ ಹೆಸರು, ಹುದ್ದೆವಾರು ವಿವರ ನೀಡುವುದು;	1) ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಮಾನ್ಯ ಲೋಕಾಯುಕ್ತ ಮತ್ತು ಭ್ರಷ್ಟಾಚಾರ ನಿಗ್ರಹ ದಳ ಇವರು ಕರ್ತವ್ಯಲೋಪ ಎಸಗಿರುವ ಅಧಿಕಾರಿ/ನೌಕರರ ವಿರುದ್ಧ ದಾಖಲಿಸಿರುವ 04 ಪ್ರಕರಣಗಳ ವಿವರ **ಅನುಬಂಧ-1 ರಲ್ಲಿ** ಲಗತ್ತಿಸಿದೆ. 2) ಕಳೆದ ಐದು ವರ್ಷಗಳಲ್ಲಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಒಟ್ಟು 34 ಅಧಿಕಾರಿ/ನೌಕರರ ಹೆಸರು, ಪದನಾಮ ಮತ್ತು ಪ್ರಕರಣಗಳ ಪ್ರಸ್ತುತ ಹಂತದ ವಿವರಗಳನ್ನು **ಅನುಬಂಧ-2ರಲ್ಲಿ** ಲಗತ್ತಿಸಿದೆ.
ಆ)	ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿ/ನೌಕರರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವವರ ವಿವರ ನೀಡುವುದು; (ಎರವಲು/ಓಓಡಿ ಮೇಲೆ ನಿಯೋಜನೆಗೊಂಡಿದ್ದಲ್ಲಿ, ಇಲಾಖೆ, ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆವಾರು ಮಾಹಿತಿ ನೀಡುವುದು);	ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಕರ್ತವ್ಯಲೋಪ ಎಸಗಿರುವ ಅಧಿಕಾರಿ / ನೌಕರರುಗಳನ್ನು ಯಾವುದೇ ಇಲಾಖೆಗೆ ಎರವಲು/ಓಓಡಿ ಮೇಲೆ ನಿಯೋಜನೆಗೊಳಿಸಿರುವುದಿಲ್ಲ.
ಇ)	ಸದರಿ ಪ್ರಕರಣಗಳ ವಿಚಾರಣೆ ಯಾವ ಹಂತದಲ್ಲಿದೆ; (ವಿವರ ನೀಡುವುದು); ಇವುಗಳಲ್ಲಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿರುವ ಪ್ರಕರಣಗಳೆಷ್ಟು; (ಪ್ರಕರಣವಾರು ವಿವರ ನೀಡುವುದು)	ಕಳೆದ ಐದು ವರ್ಷಗಳಲ್ಲಿ ಕರ್ತವ್ಯಲೋಪ ಎಸಗಿರುವ ಒಟ್ಟು 34 ಅಧಿಕಾರಿ / ನೌಕರರುಗಳ ವಿರುದ್ಧ ವಿಚಾರಣೆಯು ಇಲಾಖಾ ಹಂತದಲ್ಲಿರುತ್ತದೆ ವಿವರಗಳನ್ನು **ಅನುಬಂಧ-2ರಲ್ಲಿ** ಲಗತ್ತಿಸಿದೆ. ಇವುಗಳಲ್ಲಿ ನ್ಯಾಯಾಲಯಕ್ಕೆ ಯಾವುದೇ ಆರೋಪ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ.
ಈ)	ಪ್ರಕರಣಗಳಲ್ಲಿ ಭಾಗಿಯಾದ ಎಷ್ಟು ಅಧಿಕಾರಿ/ನೌಕರರಿಗೆ ನಿಯಮಾವಳಿಗಳನ್ವಯ ಶಿಸ್ತು ಕ್ರಮ ಜರುಗಿಸಲಾಗಿದೆ; ಕೈಗೊಂಡ ಶಿಸ್ತು ಕ್ರಮಗಳ ವಿವರಗಳನ್ನು ಹೆಸರು, ಹುದ್ದೆವಾರು ನೀಡುವುದು;	ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಕರ್ತವ್ಯಲೋಪ ಎಸಗಿ ಆರೋಪ ಸಾಬೀತಾಗಿರುವ 3 ಜನ ಅಧಿಕಾರಿ/ನೌಕರರುಗಳಿಗೆ ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನನ್ವಯ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1957ರನ್ವಯ ಶಿಸ್ತು ಕ್ರಮ ಜರುಗಿಸಿರುವ ವಿವರಗಳನ್ನು **ಅನುಬಂಧ-3ರಲ್ಲಿ** ಲಗತ್ತಿಸಿದೆ.

..2

ಉ)	ಭ್ರಷ್ಟಾಚಾರ ಮತ್ತು ಅವ್ಯವಹಾರಗಳು ಮರುಕಳಿಸದಂತೆ ಸರ್ಕಾರ ಕೈಗೊಂಡ ಸಮಗ್ರ ಕ್ರಮಗಳೇನು; (ವಿವರ ನೀಡುವುದು) ?	ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಆಡಳಿತವನ್ನು ಸುಗಮಗೊಳಿಸಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ. 1. ಇಲಾಖೆಯ ನಿರ್ದೇಶನಾಲಯ ಕಛೇರಿಯಲ್ಲಿ ಪಾರದರ್ಶಕ, ತ್ವರಿತವಾಗಿ ಕಡತ ವಿಲೆಮಾಡಲು ಮತ್ತು ಕಡತ ನಿರ್ವಹಣೆಯನ್ನು ಸಂಪೂರ್ಣವಾಗಿ ಇ-ಆಡಳಿತ (e-office) ಅನುಷ್ಠಾನಗೊಳಿಸಲಾಗಿದೆ. 2. ಅರಣ್ಯ ಪ್ರದೇಶದಲ್ಲಿರುವ ಗಣಿಗುತ್ತಿಗೆಗಳಿಗೆ ಖನಿಜ ಪರವಾನಗಿ ವಿತರಿಸಲು ಅರಣ್ಯ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯೊಂದಿಗೆ ಏಕೀಕೃತ ಪರವಾನಗಿ ವ್ಯವಸ್ಥೆ (Integrated Permit System) ಜಾರಿಗೊಳಿಸಲಾಗಿದ್ದು, ಇದರಿಂದ ಮಾನವ ಹಸ್ತಕ್ಷೇಪವಿಲ್ಲದೇ ತ್ವರಿತ ಹಾಗೂ ಪಾರದರ್ಶಕವಾಗಿ ಖನಿಜ ಪರವಾನಗಿಯನ್ನು ವಿತರಿಸುವ ಕಾರ್ಯವನ್ನು ಅನುಷ್ಠಾನಗೊಳಿಸಲಾಗಿದೆ. 3. ಸಂಪೂರ್ಣ ಗಣಕೀಕೃತವಾದ ಸಮಗ್ರ ಗುತ್ತಿಗೆ ನಿರ್ವಹಣೆ ವ್ಯವಸ್ಥೆ (ಐಎಲ್‌ಎಂಎಸ್) ಅಡಿಯಲ್ಲಿ ಆನ್-ಲೈನ್ ಇ-ಪರ್ಮಿಟ್ ನೀಡಲಾಗುತ್ತಿದ್ದು, ಇದರನ್ವಯ ಇ-ಪರ್ಮಿಟ್, ಇ-ರಿಟರ್ನ್, ಬೇಡಿಕೆ ಸಂಗ್ರಹಣೆ ಮತ್ತು ಮೌಲ್ಯ, ನಿರ್ದಿಷ್ಟವಲ್ಲದ ಉಪ ಖನಿಜಗಳ ಎಸ್.ಎಮ್.ಎಸ್ ಉಪಯೋಗಿ ಎಮ್-ಪಾಸ್ ಸೌಲಭ್ಯ, ತೂಕಮಾಪನ ಸೇತುವೆಗಳ ಕ್ರೋಢೀಕರಣ ಮುಂತಾದ ಸೌಲಭ್ಯಗಳನ್ನು ಅಂತರ್ಜಾಲ ಉಪಯುಕ್ತತೆ ಮತ್ತು ಸಮಗ್ರ ತಂತ್ರಾಂಶ ಅಭಿವೃದ್ಧಿಯೊಂದಿಗೆ ಸಾಧಿಸಲಾಗಿದ್ದು, ಸಾರ್ವಜನಿಕರಿಗೆ / ಗುತ್ತಿಗೆದಾರರಿಗೆ ಅನುಕೂಲವಾಗುವಂತೆ, ಅಗತ್ಯಕ್ಕನುಸಾರ ILMS ಅಡಿಯಲ್ಲಿ ವಿವಿಧ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. 4. ಜಿಲ್ಲಾ ಮಟ್ಟದಲ್ಲಿ ವಿವಿಧ ಚಟುವಟಿಕೆಗಳನ್ನು ಪರಿಶೀಲಿಸಲು ನಿಯಮಿತವಾಗಿ ಇಲಾಖಾ ಮಟ್ಟದಲ್ಲಿ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಾಗುತ್ತಿದೆ. 5. ಕೇಂದ್ರ ಕಛೇರಿಯಲ್ಲಿ 2 ಜಾಲಿತದಳ ರಚಿಸಲಾಗಿದ್ದು, ಸ್ವೀಕೃತಗೊಂಡ ದೂರುಗಳ ಬಗ್ಗೆ ಸ್ಥಳ ಪರಿಶೀಲನೆ ಹಾಗೂ ಹಠಾತ್ ಪರಿಶೀಲನೆ ಕೈಗೊಳ್ಳಲಾಗುತ್ತಿದೆ. 6. ಕೇಂದ್ರ ಕಛೇರಿಯ ಲೆಕ್ಕಶಾಖೆ ಸಿಬ್ಬಂದಿಗಳಿಂದ ಜಿಲ್ಲಾ ಕಛೇರಿಗಳ ಲೆಕ್ಕ ತಪಾಸಣೆ ಕಾರ್ಯ ಕೈಗೊಳ್ಳಲಾಗುತ್ತಿದೆ. 7. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವ್ಯಾಪ್ತಿಯಲ್ಲಿ 6 ಸೇವೆಗಳನ್ನು ಸಕಾಲ ಹಾಗೂ ಮಾಹಿತಿ ಸಿಂಧು ಸೇವೆಯಡಿ ತಂದು ಸದರಿ ಸೇವೆಗಳನ್ನು ನಿಗಧಿತ ಅವಧಿಯಲ್ಲಿ ನಿರ್ವಹಿಸಲಾಗುತ್ತಿದೆ.

ಸಂಖ್ಯೆ: ಸಿಐ 64 ಎಂಜಿಐಎಸ್ 2020

(ಸಿ.ಸಿ. ಪಾಟೀಲ)

ಗಣಿ ಮತ್ತು ಭೂವಿಜ್ಞಾನ ಸಚಿವರು.